ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	108 (100)
ಮಾನ್ಯ ಸದಸ್ಯರ ಹೆಸರು	ಶ್ರೀ. ಸುನೀಲ್ ಸುಬ್ರಮಣಿ. ಎಂ ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	21-09-2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕಳೆದ 05 ವರ್ಷಗಳಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಪ್ರವೇಶ ಪಡೆದು ಗ್ರಾಮೀಣ ಸೇವೆಯನ್ನು ಮಾಡುವುದಾಗಿ ಮುಚ್ಚಳಿಕೆ ಬರೆದುಕೊಟ್ಟು ಅದನ್ನು ಉಲ್ಲಂಘಿಸಲಾಗಿರುವ 589 ವೈದ್ಯರುಗಳ ವಿರುದ್ಧ ದಿನಾಂಕ:20-08-2017ರಂದು ಕೆ.ಎಂ.ಸಿಗೆ ಪತ್ರ ಬರೆಯಲಾದ ಪ್ರಕರಣದಲ್ಲಿ ಇಲ್ಲಿಯ ವರೆಗೆ ಆಗಿರುವ ಪ್ರಗತಿಯ ಬಗ್ಗೆ ವಿವರ ನೀಡುವುದು.	ದಿನಾಂಕ:20-08-2017 ರಂದು ಕೆ.ಎಂ.ಸಿಗೆ ಪತ್ರ ಬರೆಯಲಾಗಿದ್ದು, ತದನಂತರ ಒಟ್ಟು 589 ವೈದ್ಯರುಗಳ ಪೈಕಿ 21 ವೈದ್ಯರುಗಳು ದಂಡ ಮೊತ್ತ ಪಾವತಿಸಿದ್ದು, ಅವರಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿರುತ್ತದೆ.
ಆ	ಷರತ್ತು ಉಲ್ಲಂಘಿಸಿ ಗ್ರಾಮೀಣ ಸೇವೆ ಮಾಡದ ವೈದ್ಯರುಗಳ ಮೇಲೆ ವಿಧಿಸುವ ದಂಡದ ಹಣವನ್ನು ರೂ:1.00 ಕೋಟಿ ರೂಪಾಯಿಗಳಿಗೆ ಏರಿಸಲು ಸರ್ಕಾರದ ನಿಲುವೇನು; (ವಿವರ ನೀಡುವುದು)	ಷರತ್ತು ಉಲ್ಲಂಘಿಸಿ ಗ್ರಾಮೀಣ ಸೇವೆ ಮಾಡದ ವೈದ್ಯರುಗಳ ಮೇಲೆ ವಿಧಿಸುವ ದಂಡದ ಹಣವನ್ನು ರೂ.1.00 ಕೋಟಿಗಳಿಗೆ ಏರಿಸುವ ಪ್ರಸ್ತಾವನೆ ಇರುವುದಿಲ್ಲ.
ಇ	ಗ್ರಾಮೀಣ ಸೇವೆಯನ್ನು ಮಾಡದ ವೈದ್ಯರುಗಳ ಮೇಲೆ ಸರ್ಕಾರದ ತ್ವರಿತ ಮತ್ತು ಗಂಬೀರವಾದ ಕಠಿಣ ಕ್ರಮಗಳೇನು; (ವಿವರ ನೀಡುವುದು)	ಗ್ರಾಮೀಣ ಸೇವೆಯನ್ನು ಮಾಡದ ವೈದ್ಯರುಗಳು ಸರ್ಕಾರಿ ಆದೇಶದನುಸಾರ ಈ ಕೆಳಕಂಡಂತೆ ದಂಡವನ್ನು ಪಾವತಿಸಬೇಕಾಗಿರುತ್ತದೆ:- <table><tr><td>2006ರ ಸರ್ಕಾರಿ ಅಧಿಸೂಚನೆಯಂತೆ ಎಂಬಿಬಿಎಸ್ ಪದವೀಧರರು</td><td>ರೂ.1,00,000/-</td></tr><tr><td>ಸ್ನಾತಕೋತ್ತರ ಡಿಪ್ಲೊಮಾ</td><td>ರೂ.3,00,000/-</td></tr><tr><td>ಸ್ನಾತಕೋತ್ತರ ಪದವೀಧರರು</td><td>ರೂ.5,00,000/-</td></tr><tr><td>ದಿನಾಂಕ:17-7-2012ರ ಅಧಿಸೂಚನೆಯಂತೆ ಎಂಬಿಬಿಎಸ್ ಪದವೀಧರರು</td><td>ರೂ.10,00,000/-</td></tr></table>

		ಸ್ನಾತಕೋತ್ತರ ಡಿಪ್ಲೊಮಾ	ರೂ.15,00,000/-
		ಸ್ನಾತಕೋತ್ತರ ಪದವೀಧರರು	ರೂ.25,00,000/-
		ದಿನಾಂಕ:23.11.2013ರ ಅಧಿಸೂಚನೆಯಂತೆ ಸ್ನಾತಕೋತ್ತರ ಡಿಪ್ಲೊಮಾ	ರೂ.25,00,000/-
		ಸ್ನಾತಕೋತ್ತರ ಪದವೀಧರರು	ರೂ.50,00,000/-
		ಘನ ಉಚ್ಚ ನ್ಯಾಯಾಲಯದ ತೀರ್ಪಿನಂತೆ ನಿಯಮಾನುಸಾರ ಗ್ರಾಮೀಣ ಸೇವೆಯನ್ನು ಮಾಡದ ವೈದ್ಯರುಗಳಿಂದ ದಂಡ ವಸೂಲಿಗೆ ಕ್ರಮ ವಹಿಸಲಾಗುವುದು.	

ಆಕುಕ 48 ಹೆಚ್‌ಎಸ್‌ಡಿ 2020

(ಬಿ. ಶ್ರೀರಾಮುಲು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು